ಕೂಡ. ಸುದೀರ್ಘವಾದ ಪತ್ರಗಳನ್ನು ಬರೆಯುತ್ತಾ ಸದಾ ಅಣ್ಣನೊಂದಿಗೆ ಸಂಪರ್ಕದಲ್ಲಿರುವ, ತನ್ನ ವೈಚಾರಿಕ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವ ಜಯರಾಮ ತಾನೂ ಉನ್ನತಾಧ್ಯಯನಕ್ಕೆ ಹೊರಟು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಅಣ್ಣನ ಮನೆ ಸೇರುತ್ತಾನೆ. ಇಲ್ಲಿ ತನ್ನ ಅತ್ತಿಗೆಯ ಸ್ವಭಾವ ಅವನಿಗೆ ತಿಳಿಯುತ್ತದೆ. ಜ್ಞಾನ ಸಂಪಾದನೆಯಲ್ಲಾಗಲಿ, ಒಳ್ಳೆಯ ಬಾಳ್ವೆ ಮಾಡಬೇಕು ಎನ್ನುವುದರಲ್ಲಾಗಲಿ, ಸಂಬಂಧಗಳ ಬಗ್ಗಿನ ಕಾಳಜಿಯಾಗಲಿ ಆಸಕ್ತಿ ಇಲ್ಲದ ಚಂಪೆಗೆ ಅಲಂಕಾರ ಮಾಡಿಕೊಂಡು ಸುತ್ತಾಡುವುದು, ಇನ್ನೊಬ್ಬರ ತಪ್ಪನ್ನು ಎತ್ತಿ ಆಡುವುದರಲ್ಲೇ ಹೆಚ್ಚಿನ ಆಸಕ್ತಿ. ಕಾಫಿಯನ್ನೂ ಮಾಡಲು ಬಾರದೆ ಪಕ್ಕದ ಹೊಟೇಲಿನಿಂದಲೇ ಮೂರೂ ಹೊತ್ತು ತರಿಸಿಕೊಂಡು ತಿನ್ನುತ್ತಾ, ಇನ್ನೂ ಹೆಚ್ಚಿನ ಸವಲತ್ತಿಗಾಗಿ ಆಸೆ ಪಡುವವಳು. ಈಕೆಯ ಜೊತೆ ತನ್ನ ಅಣ್ಣನ ಸಂಸಾರ ಹೆಚ್ಚು ದಿನ ಸಾಗಲಾರದು ಎಂದವನು ತಿಳಿಯುತ್ತಾನೆ.

ತನ್ನ ಕಾಲೇಜಿನ ತತ್ವಶಾಸ್ತ್ರದ ಉಪನ್ಯಾಸಕರಾದ ಶೇಷಾಚಾರ್ಯರು 'ಹ್ಯೂಮನ್ ಡೆಸ್ಟಿನಿ' ಬಗ್ಗೆ ಮಾಡಿದ ಉಪನ್ಯಾಸವನ್ನು ಕೇಳಿ, ಹಲವಾರು ಪ್ರಶ್ನೆಗಳನ್ನು ಕೇಳಿ, ಆ ಕಾರಣಕ್ಕೆ ಅವರ ಅವಕೃಪೆಗೆ ಈಡಾಗಿ ಪರೀಕ್ಷೆಯಲ್ಲಿ ಅತಿ ಕಡಿಮೆ ಅಂಕಗಳನ್ನು ಪಡೆಯಬೇಕಾಗುತ್ತದೆ. ಪರೀಕ್ಷೆಯ ಬಳಿಕ, ತನ್ನ ದೊಡ್ಡ ಮಗ, ಮನೆ ಕಡೆ ನೋಡಿಕೊಂಡು, ಕೊನೆಗಾಲದಲ್ಲಿ ತಮ್ಮ ಜೊತೆ ಇರಬೇಕೆಂದು ಬಯಸಿದ ಜಾನಕಮ್ಮನ ಜೊತೆಗೆ ತಾನಾದರೂ ಇರೋಣವೆಂದು ಭಾವಿಸಿ ಮನೆಗೆ ಹೋಗುತ್ತಾನೆ. ಆದರೆ ದೊಡ್ಡವನಿಗಿರುವ ಸ್ಥಾನ ತನಗಿಲ್ಲವೆಂಬುದನ್ನು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳುತ್ತಾನೆ. ಮನೆ ಮತ್ತು ಶಿವಮೊಗ್ಗದ ಮನೆಗಳ ನಡುವೆ ಓಡಾಡಿಕೊಂಡಿರಲು ನಿರ್ಧರಿಸುತ್ತಾನೆ. ತನ್ನ ಅಜ್ಜನ ಮನೆಗೆ ಹೋಗಿರುವ ಸಂದರ್ಭದಲ್ಲಿ ಅಕಸ್ಮಿಕವಾಗಿ ಪರಿಚಯವಾದ ಬಾಲಕೃಷ್ಣ ಎಂಬ ಮೃದಂಗವಾದಕನ ನುಡಿಸಾಣಿಕೆಯನ್ನು ಬಹುವಾಗಿ ಮೆಚ್ಚಿ, ತನ್ನ ವಾದ್ಯದ ಮೂಲಕ ವಾದಕ ಹೇಗೆ ಪ್ರಕಟವಾಗುತ್ತಾನೆ ಎಂಬ ವಿಸ್ಮಯಕ್ಕೆ ಮನ ಸೋತು, ಆತನ ಬಳಿ ತಾನೂ ಮೃದಂಗ ಕಲಿಯಲು ಬಯಸುತ್ತಾನೆ. ಅವನನ್ನು ಶಿವಮೊಗ್ಗಕ್ಕೆ ಕರೆಸಿಕೊಳ್ಳುತ್ತಾನೆ. ಬಾಲಕೃಷ್ಣನ ಜೊತೆಯಲ್ಲಿ ವಯೋಲಿನ್ ವಾದನವನ್ನೂ ಬಲ್ಲ ಅವನ ತಂಗಿ ಉಮೆಯು ಬರುತ್ತಾಳೆ. ಅವಳೊಡನೆ ಸ್ನೇಹ ಕುದುರಿ, ಆಕೆ ನರ್ಸ್ ತರಬೇತಿ ಪಡೆಯುವಂತೆ ಮಾಡಿಸುತ್ತಾನೆ. ಉಮೆಯನ್ನು ಆ ಆಸ್ಪತ್ರೆಯ ವೈದ್ಯರೊಬ್ಬರು ಕಾಡುತ್ತಿದ್ದಾರೆ ಎಂಬುದನ್ನು ತಿಳಿದಾಗ, ಆತೊಂದರೆಯಿಂದ ಆಕೆಯನ್ನು ಪಾರು ಮಾಡಲು 'ತಾನು ಆಕೆಯನ್ನು ಮದುವೆಯಾಗುವವನು' ಎಂದು ಹೇಳಲೂ ಜಯರಾಮ ಹಿಂಜರಿಯುವುದಿಲ್ಲ. ಉಮೆಯಲ್ಲಿ ತಾನು ಆಪ್ತ ಸ್ನೇಹಿತೆಯನ್ನು ಕಂಡುಕೊಂಡರೂ ಅವರಿಬ್ಬರು ತನ್ನ ಮಾವನ ಇನ್ನೊಂದು ಸಂಸಾರದವರೆಂದು ಅರಿತು ಇನ್ನಷ್ಟು ವಿಚಾರಗಳ ಗೊಂದಲದೊಳಗೆ ಬೀಳುತ್ತಾನೆ. ಇದೇ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಅನಾಥವಾದ ಮಗುವೊಂದನ್ನು ತಂದು ಸಾಕುವ ತೀರ್ಮಾನ ಮಾಡುತ್ತಾನೆ. ತಾನು ಓದಿ, ಬರೆಯುವ ಕೆಲಸದಲ್ಲಿ ನಿರತನಾಗಿಕೊಂಡೇ ಅನಾಥ ಮಗುವಿನ ಪೋಷಣೆ ಮಾಡಿಕೊಂಡಿರುವ ಹೊತ್ತಿನಲ್ಲೇ ತನ್ನ ಅಣ್ಣನಿಗೆ ಮತಿಭ್ರಮಣೆಯಾಗಿರುವ ವಿಚಾರ ತಿಳಿದು ಕೂಡಲೇ ಅಲ್ಲಿಗೆ ಧಾವಿಸುತ್ತಾನೆ. ತಂದೆ ತಾಯಿಯರನ್ನೂ ಅಲ್ಲಿಗೆ ಕರೆಯಿಸಿಕೊಂಡು ಅಣ್ಣನನ್ನು ಸಮಸ್ಥಿತಿಗೆ ತರುವ ಪ್ರಯತ್ನ ಮಾಡುತ್ತಾ, ಚಂಪೆ ಹಡೆದು, ಅಲ್ಲೇ ಬಿಟ್ಟು ಹೋದ ಹಸುಗೂಸನ್ನೂ ಶಿವಮೊಗ್ಗಕ್ಕೆ ತಂದು ಸಾಕತೊಡಗುತ್ತಾನೆ. ಉಮೆಗೆ ಒಳ್ಳೆಯ ಕಡೆಯ ಸಂಬಂಧ ಬಂದು ಆಕೆ ಅಲ್ಲಿಂದ ಹೊರಡಬೇಕಾಗಿ ಬಂದಾಗಲೂ ಡಾ.ನರಸಿಂಹ ಮೂರ್ತಿ ಮತ್ತು ಅವರ ಮಗಳು ಸುಮತಿಯ ನೆರವನ್ನು ಪಡೆದು ದಾದಿಯನ್ನು ಹುಡುಕುತ್ತಾನೆ.

'ನಮ್ಮ ಮಕ್ಕಳನ್ನು ನಾವು ಪ್ರೀತಿಸುವುದು ತೀರಾ ಸಹಜ. ಇದು ಅಷ್ಟು ಸಹಜವೂ ಅಲ್ಲ, ಸುಲಭವೂ ಅಲ್ಲ' ಎನ್ನುವ ಜಯರಾಮನ ಮಾತಿಗೆ ಬೆಂಬಲವಾಗಿ ನಿಲ್ಲುತ್ತಾ ಆತನ ವಿಚಾರಗಳನ್ನು ಆರಾಧಿಸುವ ಸುಮತಿ ಅವನೊಂದಿಗಿರುವ ಸೂಚನೆಯ ಎಳೆಯೊಂದಿಗೆ ಅಸ್ಪಷ್ಟವಾಗಿಯೇ ಮುಗಿದು ಹೋಗುವ ಕಾದಂಬರಿ ಇದು. ಓದುಗರೆದುರು ಬದುಕುವ 'ಇನ್ನೊಂದು ದಾರಿ'ಯನ್ನು ಅನಾವರಣಗೊಳಿಸುತ್ತದೆ ಮಾತ್ರವಲ್ಲ 'ಇನ್ನೊಂದೇ' ದಾರಿಯಲ್ಲಿ ಸಾಗುವ ಜಯರಾಮನನ್ನು ಪರಿಚಯಿಸುತ್ತಲೇ ಆ ದಾರಿಯಲ್ಲಿನ ಚೆಲುವನ್ನು, ಧೀಮಂತಿಕೆಯನ್ನು ಜಯರಾಮನ ಪಾತ್ರದ ಮೂಲಕ ನನ್ನ ಮನದೊಳಗೆ ಬಿತ್ತಿದೆ.

●